

بسم اللهِ الرّحمٰنِ الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21-08-2020** ರಂದು ನೀಡಿದ **ಜುಮುಅ ಖುತ್‌ಬದ** ಸಾರಾಂಶ)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ
اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔ إِيَّاكَ نَعْبُدُ وَإِيَّاكَ نَسْتَعِيْنُ ۔
اِهْدِنَا الصِّرَاطَ الْمُسْتَقِيْمَ ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಇಂದು ಪ್ರಸ್ತಾಪಿಸಲಾಗುವ ಸಹಾಬಿಯ ಹೆಸರು ಹಝ್ರತ್ ಝುಬೈರ್ ಬಿನ್ ಅವಾಮ್(ರ) ಎಂದಾಗಿದೆ. ಹಝ್ರತ್ ಝುಬೈರರ(ರ) ತಂದೆಯ ಹೆಸರು ಅವಾಮ್ ಬಿನ್ ಖುವೈಲಿದ್ ಎಂದಾಗಿತ್ತು. ತಾಯಿಯ ಹೆಸರು ಸಫಿಯಾ ಬಿನ್ತ್ ಅಬ್ದುಲ್ ಮುತ್ತಲಿಬ್ ಎಂದಾಗಿತ್ತು. ಅವರ ತಾಯಿಯು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತಂದೆಯ ಸಹೋದರಿಯಾಗಿದ್ದರು. ಝುಬೈರ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯಾದ ಹಝ್ರತ್ ಖದೀಜರ(ರ) ಸೋದರ ಪುತ್ರರಾಗಿದ್ದರು. ಹಝ್ರತ್ ಝುಬೈರರ(ರ) ವಿವಾಹ ಹಝ್ರತ್ ಅಬೂಬಕ್ಕರ್ ಸಿದ್ದೀಖ್‌ರ(ರ) ಮಗಳಾದ ಹಝ್ರತ್ ಅಸ್ಮಾ(ರ)ರೊಂದಿಗೆ ನಡೆದಿತ್ತು. ಹೀಗೆ ಹಝ್ರತ್ ಝುಬೈರ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಾಡು ಸಹ ಆಗಿದ್ದರು. ಹಝ್ರತ್ ಝುಬೈರ್(ರ) ಹಝ್ರತ್ ಅಬೂಬಕ್ಕರರ(ರ) ನಂತರ ಇಸ್ಲಾಮ್ ಧರ್ಮ ಸ್ವೀಕರಿಸಿದರು. ಇಸ್ಲಾಮ್ ಸ್ವೀಕರಿಸುವವರಲ್ಲಿ ಅವರು ನಾಲ್ಕನೇ ಅಥವಾ ಐದನೇಯ ವ್ಯಕ್ತಿಯಾಗಿದ್ದರು. ಹಝ್ರತ್ ಝುಬೈರ್(ರ) 12ನೇ ವಯಸ್ಸಿನಲ್ಲಿ ಮತ್ತು ಕೆಲವು ವರದಿಗಳ ಪ್ರಕಾರ 8ನೇ ಅಥವಾ 16ನೇ ವಯಸ್ಸಿನಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಜೀವಿತದಲ್ಲೇ ಸ್ವರ್ಗದ ಸುವಾರ್ತೆ ನೀಡಿದ 10 ಸೌಭಾಗ್ಯಶಾಲಿಗಳಲ್ಲಿ ಹಝ್ರತ್ ಝುಬೈರ್(ರ) ಒಬ್ಬರಾಗಿದ್ದರು. ಅದೇ ರೀತಿಯಲ್ಲಿ ಅವರು ಹಝ್ರತ್ ಉಮರ್(ರ) ತಮ್ಮ ಮರಣಕ್ಕೆ ಮುಂಚಿತವಾಗಿ ಮುಂದಿನ ಖಲೀಫರನ್ನು ಆಯ್ಕೆ ಮಾಡಲು ನಾಮ ನಿರ್ದೇಶಿಸಿದ್ದ 'ಶೂರಾ'ದ 6 ಸದಸ್ಯರಲ್ಲಿ ಒಬ್ಬರಾಗಿದ್ದರು.

ಹಝ್ರತ್ ಝುಬೈರ್(ರ) ಇಸ್ಲಾಮ್ ಧರ್ಮ ಸ್ವೀಕರಿಸಿದಾಗ, ಇಸ್ಲಾಮನ್ನು ಉಪೇಕ್ಷಿಸಿ ಅವಿಶ್ವಾಸಕ್ಕೆ ಮರಳುವಂತೆ ಮಾಡಲು ಅವರ ಚಿಕ್ಕಪ್ಪ ಅವರನ್ನು ಚಾಪೆಯಲ್ಲಿ ಸುತ್ತಿ ಹೊಗೆ ಬಿಡುತ್ತಿದ್ದರು. ಆದರೆ ಇನ್ನು ಅವಿಶ್ವಾಸಕ್ಕೆ ಮರಳುವುದಿಲ್ಲ ಎಂದು ಅವರು ಹೇಳುತ್ತಾ ಇದ್ದರು.

ಹಝ್ರತ್ ಝುಬೈರ್(ರ) ಹಬ್ಶಾ ಕಡೆಗೆ ಮಾಡಲಾದ ಎರಡು ಹಿಜ್‌ರತ್‌ಗಳಲ್ಲೂ ಇದ್ದರು. ಅವರು ವಲಸೆ ಮಾಡಿ ಮದೀನಕ್ಕೆ ಬಂದಾಗ ಹಝ್ರತ್ ಮುಂಝಿರ್ ಬಿನ್ ಮುಹಮ್ಮದ್ ಬಳಿಯಲ್ಲಿ ವಾಸಮಾಡಿದರು. ಹಝ್ರತ್ ಝುಬೈರರ(ರ) ಪತ್ನಿಯಾದ ಅಸ್ಮಾ(ರ) ವರದಿ ಮಾಡುತ್ತಾರೆ: "ನಾನು ಮಕ್ಕದಿಂದ ಹಿಜ್‌ರತ್ ಮಾಡಿ ಹೊರಡುವ ಸಮಯದಲ್ಲಿ ನಾನು ಗರ್ಭಿಣಿಯಾಗಿದ್ದೆ. ನಾನು ಖುಬಾದಲ್ಲಿ ತಂಗಿದೆ. ಅಲ್ಲೇ ಅಬ್ದುಲ್ಲಾಹ್ ಬಿನ್ ಝುಬೈರನ ಜನನವಾಯಿತು. ನಾನು ಅವನನ್ನು ಎತ್ತಿಕೊಂಡು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಹಾಜರಾದೆ. ಅವರು ಅವನನ್ನು ತಮ್ಮ ಮಡಿಲಲ್ಲಿ ಇರಿಸಿ ಅವನ ಬಾಯಿಗೆ ತಮ್ಮ ಬಾಯಿಯ ಜೊಲ್ಲನ್ನು ಹಾಕಿದರು. ಅವನ ಹೊಟ್ಟೆಯೊಳಗೆ ಹೋದ ಮೊದಲ ವಸ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹೀತ ಲಾಲಾರಸವಾಗಿತ್ತು. ಅನಂತರ ಅವರು ಖರ್ಜೂರವನ್ನು ಜಗಿದು ಅವನ ಬಾಯಿಗೆ ಹಾಕಿದರು. ಅವನಿಗಾಗಿ ಅನುಗ್ರಹದ ಪ್ರಾರ್ಥನೆ ಮಾಡಿದರು. ಅವನು ಮುಸ್ಲಿಮ್ ಆಗಿ ಹುಟ್ಟಿದ ಮೊದಲ ಮಗುವಾಗಿದ್ದನು.

ಹಝ್ರತ್ ಝುಬೈರ್ ತನ್ನ ಗಂಡು ಮಕ್ಕಳಿಗೆ ಶಹೀದ್ ಆದವರ ಹೆಸರನ್ನು ಇಟ್ಟಿದ್ದರು. ಅಲ್ಲಾಹನು ಆ ಗಂಡುಮಕ್ಕಳಿಗೆ ಶಹೀದ್ ಪದವಿ ನೀಡಬಹುದು ಎಂಬ ಪ್ರತೀಕ್ಷೆಯಿಂದ ಅವರು ಹಾಗೆ ಮಾಡಿದ್ದರು. ಹಝ್ರತ್ ಸಈದ್ ಬಿನ್ ಮುಸೈಬ್ ವರದಿ ಮಾಡುತ್ತಾರೆ: ಅಲ್ಲಾಹನ ಮಾರ್ಗದಲ್ಲಿ ತಮ್ಮ ಖಡ್ಗವನ್ನು ಕವಚದಿಂದ ಹೊರತೆಗೆದ ಮೊದಲ ವ್ಯಕ್ತಿ ಹಝ್ರತ್ ಝುಬೈರ್ ಬಿನ್ ಅವಾಮ್(ರ) ಆಗಿದ್ದರು. ಒಂದು ಸಲ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಶಹೀದ್ ಮಾಡಲಾಗಿದೆ ಎಂದು ಅಚಾನಕ್ಕಾಗಿ ಎಲ್ಲಿಂದಲೋ ಕೇಳಿಬಂತು. ಹಝ್ರತ್ ಝುಬೈರ್(ರ) ಕೂಡಲೇ ತನ್ನ ಖಡ್ಗವನ್ನು ತೆಗೆದು ಹೊರಟರು. ಮಾರ್ಗ ಮಧ್ಯೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ನೋಡಿ ಕೇಳಿದರು: ಝುಬೈರ್, ನಿಲ್ಲು ನಿಲ್ಲು, ಏನಾಯಿತು? ಹಝ್ರತ್ ಝುಬೈರ್ ಹೇಳಿದರು: ನಿಮ್ಮನ್ನು ಶಹೀದ್ ಮಾಡಲಾಗಿದೆ ಎಂದು ನನಗೆ ಎಲ್ಲಿಂದಲೋ ಶಬ್ದಬಂದಿತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನಾನು ಶಹೀದ್ ಆಗಿದ್ದರೆ ನಿನಗೆ ಏನು ಮಾಡಲು ಸಾಧ್ಯ? ಆಗ ಅವರು ಹೇಳಿದರು: ಅಲ್ಲಾಹನಾಣೆ, ನಾನು ಮಕ್ಕಾ ನಿವಾಸಿಗಳಾದ ಎಲ್ಲರನ್ನೂ ಕೊಲ್ಲಲು ಉದ್ದೇಶಿಸಿದ್ದೆ. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗಾಗಿ ವಿಶೇಷವಾದೊಂದು ಪ್ರಾರ್ಥನೆ ಮಾಡಿದರು. ಒಂದು ವರದಿ ಪ್ರಕಾರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಖಡ್ಗಕ್ಕಾಗಿಯೂ ದುಆ ಮಾಡಿದ್ದರು ಎಂದು ಬಂದಿದೆ.

ಹಝ್ರತ್ ಝುಬೈರ್(ರ) ಬದರ್, ಉಹದ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗಿಯಾಗಿದ್ದರು. ಉಹದ್ ಯುದ್ಧದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸ್ಥೈರ್ಯದಿಂದ ಇದ್ದರು. ಮರಣಕ್ಕೂ ತಯಾರಾಗಿದ್ದೇವೆ ಎಂದು

ಹೇಳಿ ಅವರು ಬೈಅತ್ (ಪ್ರತಿಜ್ಞೆ) ಮಾಡಿದ್ದರು. ಮಕ್ಕಾ ವಿಜಯದ ವೇಳೆ ಮುಹಾಜಿರ್‌ಗಳ ಮೂರು ಧ್ವಜಗಳಲ್ಲಿ ಒಂದು ಧ್ವಜ ಹಝ್ರತ್ ಝುಬೈರರ(ರ) ಬಳಿಯಲ್ಲಿ ಇತ್ತು. ಬದ್ರ್ ದಿವಸ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಎರಡು ಕುದುರೆಗಳು ಮಾತ್ರ ಇದ್ದುವು. ಅವುಗಳಲ್ಲಿ ಒಂದರಲ್ಲಿ ಹಝ್ರತ್ ಝುಬೈರ್(ರ) ಸವಾರರಾಗಿದ್ದರು. ಬದ್ರ್ ಯುದ್ಧದಲ್ಲಿ ಹಝ್ರತ್ ಝುಬೈರ್(ರ) ಹಳದಿ ಮುಂಡಾಸನ್ನು ತಲೆಗೆ ಕಟ್ಟಿದ್ದರು. ದೇವದೂತರು ಝುಬೈರಿನ ಹಾಗೆಯೇ ಇಳಿದು ಬಂದಿರುವರು ಎಂದು ಹಝ್ರತ್ ಝುಬೈರ್(ರ) ಮುಂಡಾಸು ತಲೆಗೆ ಕಟ್ಟಿದ್ದನ್ನು ನೋಡಿ ಹಝ್ರತ್ ಪೈಗಂಬರ್ ಹೇಳಿದರು. ಎಂದರೆ, ಅಲ್ಲಾಹನು ಸಹಾಯಕ್ಕಾಗಿ ಕಳುಹಿಸಿದ ಮಲಕುಗಳು ಸಹ ಇದೇ ಬಣ್ಣದ ಮುಂಡಾಸು ಧರಿಸಿ ಹೋರಾಡುತ್ತಿದ್ದಾರೆ.

ಹಝ್ರತ್ ಝುಬೈರ್(ರ) ಹೇಳುತ್ತಿದ್ದರು: ಬದ್ರ್ ಯುದ್ಧದ ದಿನ ಉಬೈದ್ ಬಿನ್ ಸಈದ್‌ನೊಡನೆ ನನ್ನ ಮುಖಾಮುಖಿಯಾಯಿತು. ಅವನು ತನ್ನ ಶರೀರವನ್ನು ಅಸ್ತ್ರಗಳಿಂದ ಪೂರ್ತಿಯಾಗಿ ಮುಚ್ಚಿದ್ದನು. ಅವನ ಕಣ್ಣುಗಳನ್ನು ಮಾತ್ರವೇ ಕಾಣಬಹುದಾಗಿತ್ತು. ಅವನ ಉಪನಾಮ ಅಬೂದ್ದ್ಝಾತುಲ್ ಖುರ್‌ಶ್ ಎಂದಾಗಿತ್ತು. ತಾನು ಅಬೂದ್ದ್ಝಾತುಲ್ ಖುರ್‌ಶ್ ಆಗಿರುವೆನು ಎಂದು ಅವನು ಹೇಳತೊಡಗಿದ. ಅದನ್ನು ಕೇಳಿದಾಕ್ಷಣ ನಾನು ಈಟಿಯಿಂದ ಅವನ ಮೇಲೆ ಹಲ್ಲೆ ಮಾಡಿದೆ. ಅವನ ಕಣ್ಣಿಗೆ ಗಾಯವಾಗಿ ಅವನು ಅಲ್ಲೇ ಮೃತನಾದನು. ನಾನು ನನ್ನ ಕಾಲನ್ನು ಅವನ ಮೇಲೆ ಇಟ್ಟು ಬಹಳ ಬಲದಿಂದ ಮತ್ತು ಬಹಳ ಕಷ್ಟಪಟ್ಟು ಆ ಈಟಿಯನ್ನು ಎಳೆದೆನು. ಅದರ ಇಬ್ಬಾಗವೂ ಬಗ್ಗಿ ಹೋಗಿತ್ತು. ಅವರು ಹೇಳುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಈಟಿಯನ್ನು ಹಝ್ರತ್ ಝುಬೈರರಿಂದ(ರ) ಕೇಳಿ ಪಡೆದುಕೊಂಡರು. ಅವರು ಅದನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನೀಡಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಫಾತ್ ಆದಾಗ ಹಝ್ರತ್ ಝುಬೈರ್(ರ) ಅದನ್ನು ಮರಳಿ ಪಡೆದರು. ಅದರ ನಂತರ ಹಝ್ರತ್ ಅಬೂಬಕ್ಕರ್(ರ) ಆ ಈಟಿಯನ್ನು ಕೇಳಿ ಪಡಕೊಂಡರು. ಹಝ್ರತ್ ಅಬೂಬಕ್ಕರ್(ರ) ನಿಧನರಾದಾಗ, ಹಝ್ರತ್ ಉಮರ್(ರ) ಆ ಈಟಿಯನ್ನು ಅವರಿಂದ ಕೋರಿದರು. ಅವರು ಹಝ್ರತ್ ಉಮರರಿಗೆ ಅದನ್ನು ಕೊಟ್ಟರು. ಹಝ್ರತ್ ಉಮರ್(ರ) ನಿಧನರಾದಾಗ ಹಝ್ರತ್ ಝುಬೈರ್(ರ) ಅದನ್ನು ವಾಪಾಸ್ಸು ತೆಗೆದರು. ಅನಂತರ ಹಝ್ರತ್ ಉಸ್ಮಾನ್(ರ) ಆ ಈಟಿಯನ್ನು ಬೇಡಿದರು. ಹಝ್ರತ್ ಝುಬೈರ್(ರ) ಅದನ್ನು ಹಝ್ರತ್ ಉಸ್ಮಾನ್‌ರಿಗೆ(ರ) ಕೊಟ್ಟರು. ಹಝ್ರತ್ ಉಸ್ಮಾನ್ ಶಹೀದ್ ಆದಾಗ ಅದು ಹಝ್ರತ್ ಅಲಿಯರ(ರ) ಕುಟುಂಬಕ್ಕೆ ಲಭಿಸಿತು. ಕೊನೆಗೆ ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೈರ್(ರ) ಅದನ್ನು ಅವರಿಂದ ವಾಪಾಸ್ಸು ಪಡೆದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೈರ್ ಶಹೀದ್ ಆಗುವ ವರೆಗೆ ಅದು ಅವರ ಬಳಿಯಲ್ಲೇ ಇತ್ತು.

ಹಝ್ರತ್ ಝುಬೈರ್ ಬಿನ್ ಅವಾಮ್(ರ) ಹೇಳುತ್ತಾರೆ: ಉಹದ್ ಯುದ್ಧದ ದಿನ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನೊಡನೆ ಹೀಗೆ ಹೇಳಿದರು: ನನ್ನ ತಂದೆ ತಾಯಿ ನಿನಗಾಗಿ ಅರ್ಪಣವಾಗಲಿ. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಖಂದಕ್ ಯುದ್ಧದ ವೇಳೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪ್ರತಿ ಪ್ರವಾದಿಗೂ ಒಬ್ಬ ವಿಶಿಷ್ಟ ಶಿಷ್ಯನಿರುತ್ತಾನೆ. ನನ್ನ ವಿಶಿಷ್ಟ ಶಿಷ್ಯ ಝುಬೈರ್ ಆಗಿರುವನು.

ಖೈಬರ್ ಯುದ್ಧದಲ್ಲಿ ಯಹೂದಿಯರ ಪ್ರಸಿದ್ಧ ಸರದಾರ ಮರ್ಹಬನು ಹಝ್ರತ್ ಮುಹಮ್ಮದ್ ಬಿನ್ ಮಸ್ಲಿಮರ ಕೈಯಲ್ಲಿ ಕೊಲ್ಲಲ್ಪಟ್ಟನು. ಆಗ ಅವನ ಸಹೋದರ ಯಾಸಿರ್ ಮುಂದೆ ಬಂದು ನನ್ನೊಡನೆ ಹೋರಾಡಲು ಯಾರಿದ್ದಾರೆ ಎಂದು ಉಚ್ಚಸ್ವರದಲ್ಲಿ ಕೇಳಿದನು. ಹಝ್ರತ್ ಝುಬೈರ್(ರ) ಅವನನ್ನು ಎದುರಿಸಲು ಮುಂದೆ ಬಂದರು. ಹಝ್ರತ್ ಸಫಿಯಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹೇಳಿದರು: ಇಂದು ನನ್ನ ಮಗನಿಗೆ ಶಹಾದತ್ ಲಭಿಸುವುದು ಎಂದು ನನಗೆ ತೋರುತ್ತಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇಲ್ಲ, ಬದಲಿಗೆ ನಿನ್ನ ಮಗ ಅವನನ್ನು ಕೊಲ್ಲುವನು. ಯಾಸಿರ್‌ನೊಂದಿಗೆ ಸೆಣಸಾಡಲು ಹಝ್ರತ್ ಝುಬೈರ್ ಹೊರಟರು. ಅವನು ಹಝ್ರತ್ ಝುಬೈರರ(ರ) ಕೈಯಿಂದ ಕೊಲ್ಲಲ್ಪಟ್ಟನು.

ಸತ್ಯನಿಷೇಧಿಗಳಿಗೆ ಕೊಡಲಿಕ್ಕಾಗಿ ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅರ ಪತ್ರವನ್ನು ತೆಗೆದುಕೊಂಡು ಹೋಗುತ್ತಿದ್ದ ಮಹಿಳೆಯನ್ನು ಗುರುತು ಹಿಡಿಯಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಳುಹಿಸಿದ್ದ ಮೂರು ಜನರಲ್ಲಿ ಒಬ್ಬರು ಹಝ್ರತ್ ಝುಬೈರ್(ರ) ಆಗಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹಝ್ರತ್ ಝುಬೈರರ(ರ) ಕುರಿತು ಒಂದು ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹುಬುಲ್ ಎಂಬ ಹೆಸರಿನ ವಿಗ್ರಹದ ಮೇಲೆ ತನ್ನ ಬಡಿಗೆಯನ್ನು ಬೀಸಿದಾಗ ಅದು ಅದರ ಜಾಗದಿಂದ ಬಿದ್ದು ಚೂರಾಯಿತು. ಆಗ ಹಝ್ರತ್ ಝುಬೈರ್(ರ) ಅಬೂಸುಫ್ಯಾನ್ ಕಡೆಗೆ ಮುಗುಳ್ನಗುತ್ತಾ ನೋಡಿ ಹೀಗೆ ಹೇಳಿದರು: ಉಹದ್ ದಿನದಂದು ಮುಸ್ಲಿಮರು ಗಾಯಾಳುಗಳಾಗಿ ಒಂದು ಕಡೆ ನಿಂತಿದ್ದಾಗ ನೀನು ಗರ್ವದಿಂದ ಹುಬುಲಿಗೆ ಜೈಕಾರ ಹಾಕಿ, ಹುಬುಲ್ ವಿಗ್ರಹವು ನಿಮಗೆ ಉಹದ್ ದಿನದಂದು ಮುಸ್ಲಿಮರ ಮೇಲೆ ವಿಜಯ ನೀಡಿತ್ತು ಎಂದು ಘೋಷಿಸಿದ್ದು ನೆನಪಿದೆಯಾ? ನಿನ್ನ ಮುಂದೆ ಹುಬುಲಿನ ಚೂರುಗಳು ಬಿದ್ದಿರುವುದು ನೀನಿಂದು ನೋಡುತ್ತಿದ್ದಿಯಾ ಎಂದು ಹೇಳಿದರು. ಆಗ ಅಬೂಸುಫ್ಯಾನ್ ಹೇಳಿದ: ಝುಬೈರ್, ಈ ಮಾತುಗಳನ್ನು ಬಿಟ್ಟುಬಿಡು, ಇಂದು ನಮಗೆ ಎಲ್ಲವೂ ಉತ್ತಮ ರೀತಿಯಲ್ಲಿ ಕಾಣುತ್ತಿವೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೇವನ ಹೊರತು ಬೇರೆ ದೇವನಿರುತ್ತಿದ್ದರೆ, ನಾವಿಂದು ನೋಡುತ್ತಿರುವುದು ಎಂದೂ ನಡೆಯುತ್ತಿರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೇವನ ಹೊರತು ಬೇರೆ ದೇವನಿಲ್ಲ.

ಶಾಮ್ ವಿಜಯದ ನಂತರ ಹಝ್ರತ್ ಅಮ್ರ್ ಬಿನ್ ಆಸ್‌ರ ನೇತೃತ್ವದಲ್ಲಿ ಈಜಿಪ್ಟ್ ಮೇಲೆ ಆಕ್ರಮಣ ನಡೆಯಿತು. ಮುಸ್ಲಿಮರು ಫಿಸ್‌ತಾತ್ ಪಟ್ಟಣವನ್ನು ಸುತ್ತುವರೆದರು. ಹಝ್ರತ್

ಅಮ್‌ರ್ ಬಿನ್ ಆಸ್‌ರವರು ತನ್ನ ಮುಂದೆ ದೃಢವಾದ ಗಟ್ಟಿ ಕೋಟೆಯನ್ನು ಮತ್ತು ತನ್ನ ಸೈನ್ಯದ ಅಂಗಬಲದ ಕೊರತೆಯನ್ನು ಕಂಡಾಗ ಹಝ್ರ‌ತ್ ಉಮರ್‌ರೊಡನೆ ತನ್ನ ನೆರವಿಗಾಗಿ ಒಂದು ಸೈನ್ಯವನ್ನು ಕಳುಹಿಸಲು ವಿನಂತಿಸಿದರು. ಹಝ್ರ‌ತ್ ಉಮರ್(ರ) ಹತ್ತು ಸಾವಿರ ಸೈನಿಕರನ್ನು ಮತ್ತು ನಾಲ್ಕು ಅಧಿಕಾರಿಗಳನ್ನು ಕಳುಹಿಸಿದರು. ಇವರಲ್ಲಿ ಪ್ರತಿಯೊಬ್ಬ ಅಧಿಕಾರಿ ಒಂದು ಸಾವಿರ ಸೈನಿಕರಿಗೆ ಸಮಾನರು ಎಂದು ಹಝ್ರ‌ತ್ ಉಮರ್(ರ) ಹೇಳಿದರು. ಅವರಲ್ಲಿ ಒಬ್ಬರು ಹಝ್ರ‌ತ್ ಝುಬೈರ್(ರ) ಆಗಿದ್ದರು. ಹಝ್ರ‌ತ್ ಅಮ್‌ರ್ ಬಿನ್ ಆಸ್ ಮುತ್ತಿಗೆಯ ಏರ್ಪಾಡುಗಳನ್ನು ಅವರಿಗೆ ವಹಿಸಿಕೊಟ್ಟರು. ಏಳು ತಿಂಗಳ ವರೆಗೆ ಮುತ್ತಿಗೆ ಜಾರಿಯಲ್ಲಿತ್ತು. ಹಝ್ರ‌ತ್ ಝುಬೈರ್ ಒಂದು ದಿನ ಹೇಳಿದರು: ನಾನಿಂದು ಮುಸ್ಲಿಮರಿಗಾಗಿ ಅರ್ಪಣೆಯಾಗುವೆನು. ಹೀಗೆ ಹೇಳಿ ಖಡ್ಗವನ್ನು ಕೈಯಲ್ಲಿ ಹಿಡಿದು ಏಣಿ ಹಾಕಿ ಕೋಟೆಯ ಗೋಡೆಯ ಮೇಲೆ ಏರಿದರು. ಇತರ ಕೆಲವು ಸಹಾಬಿಯರು ಅವರೊಂದಿಗೆ ಸೇರಿದರು. ಗೋಡೆಯ ಮೇಲೆ ತಲುಪಿದ ನಂತರ ಎಲ್ಲರೂ ಒಟ್ಟಿಗೆ ಅಲ್ಲಾಹು ಅಕ್ಬರ್ ಎಂದು ಉಚ್ಚಸ್ವರದಲ್ಲಿ ಘೋಷಿಸಿದರು. ಇವರೊಂದಿಗೆ ಕೋಟೆಯು ದಿಗಿಲುಗೊಳ್ಳುವ ರೀತಿಯಲ್ಲಿ ಸಂಪೂರ್ಣ ಸೈನ್ಯ ಸಹ ಉಚ್ಚ ಸ್ವರದಲ್ಲಿ ತಕ್ಬೀರ್ ಹೇಳಿದರು. ಮುಸ್ಲಿಮರು ಕೋಟೆಯ ಒಳಗೆ ನುಗ್ಗಿರುವರು ಎಂದು ಭಾವಿಸಿ ಕ್ರೈಸ್ತರು ಹುಚ್ಚರಂತೆ ಓಡಲು ತೊಡಗಿದರು. ಹಝ್ರ‌ತ್ ಝುಬೈರ್ ಗೋಡೆಯಿಂದ ಇಳಿದು ಕೋಟೆಯ ಬಾಗಿಲನ್ನು ತೆರೆದರು. ಪೂರ್ತಿ ಸೈನ್ಯ ಒಳಗೆ ನುಗ್ಗಿತು.

ಹಝ್ರ‌ತ್ ಝುಬೈರ್ ಬಗ್ಗೆ ಉಳಿದ ಭಾಗವನ್ನು ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು, ಇನ್‌ಶಾ ಅಲ್ಲಾಹ್. (ಹುಝೂರ್ ಸನ್ಮಾನ್ಯ ಮಿಅ್‌ರಾಜ್ ಅಹ್ಮದ್ ಸಾಹಿಬ್ ಶಹೀದ್ ಇಬ್ನ್ ಮಹ್ಮೂದ್ ಅಹ್ಮದ್ ಸಾಹಿಬ್ ಆಫ್ ಡೋಗ್ರಿ ಗಾರ್ಡನ್‌ರ ಬಗ್ಗೆ ಪ್ರಸ್ತಾಪಿಸಿದರು. ಅವರು ಪಿಶಾವರ್ ಜಿಲ್ಲೆಯವರಾಗಿದ್ದರು. ಅವರನ್ನು ಅಹ್ಮದಿಯ್ಯತಿನ ವಿರೋಧಿಗಳು ಆಗಸ್ಟ್ 12ರಂದು ಫೈರಿಂಗ್ ಮಾಡಿ ಶಹೀದ್ ಮಾಡಿದ್ದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.)** ಹುಝೂರ್ ಹೇಳಿದರು: ಈಗ ಪಾಕಿಸ್ತಾನದಲ್ಲಿ ಬಹಳ ತೀವ್ರತರದಲ್ಲಿ ವಿರೋಧಗಳು ನಡೆಯುತ್ತಿವೆ. ಅಲ್ಲಾಹನು ಅವರ ಉಪದ್ರವಗಳನ್ನು ಅವರ ವಿರುದ್ಧವೇ ತಿರುಗಿಸಲಿ. ಈ ದಿನಗಳಲ್ಲಿ ನಾವು ಬಹಳ ಹೆಚ್ಚಾಗಿ ದುಆ ಮಾಡುತ್ತಿರಬೇಕು. **ರಬ್ಬಿ ಕುಲ್ಲಿ ಶೈಇನ್ ಖ಼ಾದಿಮುಕ ರಬ್ಬಿ ಫಹ್‌ಫಝ್ನೀ ವನ್‌ಸುರ್‌ನೀ ವರ್‌ಹಮ್‌ನೀ – ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನಹೂರಿಹಿಮ್ ವನಊಧುಬಿಕ ಮಿನ್ ಶುರೂರಿಹಿಮ್** ಎಂಬ ಪ್ರಾರ್ಥನೆಗಳನ್ನು ಹೆಚ್ಚಾಗಿ ಮಾಡುತ್ತಿರಬೇಕು. ಹೆಚ್ಚು ಹೆಚ್ಚು ದುರೂದ್ ಶರೀಫ್ ಹೇಳುತ್ತಿರಬೇಕು. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯನ್ನು ಈ ಕಿಡಿಗೇಡಿಗಳ ಕುಚೇಷ್ಟೆಗಳಿಂದ ಸಂರಕ್ಷಿಸಲಿ. ಈ ಶತ್ರುತ್ವ ವರ್ಧಿಸುವಷ್ಟು ನಾವು ಅಲ್ಲಾಹನ ಮುಂದೆ ಬಾಗುವುದನ್ನು ಸಹ ವರ್ಧಿಸಬೇಕು.

(ಅದರ ನಂತರ ಹುಝೂರ್, ಸನ್ಮಾನ್ಯ ಅದೀಬ್ ಅಹ್ಮದ್ ನಾಸಿರ್ ಮುಬಲ್ಲಿಗ್ ಮತ್ತು ಸನ್ಮಾನ್ಯ ಹಮೀದ್ ಅಹ್ಮದ್ ಶೇಖ್ ಸಾಹಿಬರ ಒಳಿತುಗಳ ಬಗ್ಗೆ ಪ್ರಸ್ತಾಪಿಸಿ, ಅವರಿಗಾಗಿ ಮಗ್ಫಿರತಿನ ದುಆ ಮಾಡಿದರು. ಜುಮಾ ನಮಾಝ್ ನಂತರ ಜನಾಝ ನಮಾಝ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 21-08-2020*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon